# ಬಿ.ಬಿ.ಎಂ.ಪಿ ಮಹದೇವಪುರವಲಯ, ವಾರ್ಡ್ ಸಂಖ್ಯೆ.53, ಬಸವನಪುರ

## ವಾರ್ಡ್ ಸಮಿತಿಯ ನಡವಳಿಗಳು

******

ದಿನಾಂಕ: 10/05/2021

ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳು ಹಾಗೂ ಅಧಿಕಾರಿಗಳು
ಶ್ರೀ. ನಾಗೇಶ್, ನೋಡಲ್ ಅಧಿಕಾರಿ ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು,
ಶ್ರೀ. ವಿನಯ್. ಕೆ, ಸಹಾಯಕ ಅಭಿಯಂತರರು, ವಾರ್ಡ್ ಸಂಖ್ಯೆ.53, ಬಸವನಪುರ ಹಾಗೂ ವಾರ್ಡ್ ಸಮಿತಿ ಕಾರ್ಯದರ್ಶಿಗಳು,
ಶ್ರೀ. ರಾಘವೇಂದ್ರ. ಜೆ.ಎನ್, ಆರೋಗ್ಯ ಪರಿವೀಕ್ಷಕರು, ವಾರ್ಡ್ ಸಂಖ್ಯೆ.53, ಬಸವನಪುರ,
ಶ್ರೀ. ಸುರೇಶ್. ಎಸ್, ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ಸಂಖ್ಯೆ.53, ಬಸವನಪುರ,
ಶ್ರೀ. ಓಬಲೇಶ್.ವಿ. ತೆರಿಗೆ ನಿರೀಕ್ಷಕರು, ವಾರ್ಡ್ ಸಂಖ್ಯೆ.53, ಬಸವನಪುರ,
ಮತ್ತು ವಾರ್ಡ್‌ನ ಸಾರ್ವಜನಿಕರು.

ಮಾನ್ಯ ಮುಖ್ಯ ಆಯುಕ್ತರ ಕಛೇರಿ ಆದೇಶ ಸಂಖ್ಯೆ: ಬಿ12(ಕೋ–19)/04/2021–22 ರಂತೆ ವಾರ್ಡ್–53 ಬಸವನಪುರದ ವಾರ್ಡ್ ಮಟ್ಟದ ವಿಕೇಂದ್ರೀಕೃತ ಚಿಕಿತ್ಸೆಯ ಸರದಿ ನಿರ್ಧಾರ ಮತ್ತು ತುರ್ತು ಪ್ರತಿಕ್ರಿಯೆ ಸಮಿತಿ (W.D.C) ಗೆ ನೇಮಿಸಿರುವ ಮಾನ್ಯ ನೋಡಲ್ ಅಧಿಕಾರಿಯವರ ಆದೇಶದಂತೆ, ದಿನಾಂಕ **10/05/2021** ರಂದು ಕೆ.ಆರ್.ಪುರ ವಿಧಾನಸಭಾ ಕ್ಷೇತ್ರದ, ಬಿ.ಬಿ.ಎಂ.ಪಿ ಮಹದೇವಪುರ ವಲಯದ ವಾರ್ಡ್ ಸಂಖ್ಯೆ.53, ಬಸವನಪುರ ವಾರ್ಡ್ ಸಮಿತಿಯ ಸಭೆಯನ್ನು ಮಾನ್ಯ ಅಧ್ಯಕ್ಷರು ವಾರ್ಡ್ ಸಮಿತಿ ಮತ್ತು ನೋಡಲ್ ಅಧಿಕಾರಿಗಳಾದ ಶ್ರೀ. ನಾಗೇಶ್, ಮತ್ತು ವಾರ್ಡ್ ಸಮಿತಿ ಕಾರ್ಯದರ್ಶಿಗಳು ಹಾಗೂ ಸಹಾಯಕ ಅಭಿಯಂತರರಾದ ಶ್ರೀ. ವಿನಯ್.ಕೆ ರವರ ಸಮ್ಮುಖದಲ್ಲಿ ತುರ್ತು ಸಭೆಯನ್ನು ನಡೆಸಲಾಯಿತು.

ವಾರ್ಡ್ ಸಮಿತಿಯ ಕಾರ್ಯದರ್ಶಿಗಳಾದ ಶ್ರೀ. ವಿನಯ್.ಕೆ ರವರು ಸಭೆಗೆ ಹಾಜರಾದ ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳಾದ ಶ್ರೀ. ನಾಗೇಶ್, ರವರಿಗೆ ಹಾಗೂ ಸಭೆಗೆ ಹಾಜರಾಗಿದ್ದ ಎಲ್ಲಾ ಅಧಿಕಾರಿಗಳು ಮತ್ತು ಸಾರ್ವಜನಿಕರಿಗೆ ಸ್ವಾಗತವನ್ನು ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು.

ಸದರಿ ಸಭೆಯಲ್ಲಿ ಮೊಟ್ಟಮೊದಲಿಗೆ ಎಲ್ಲಾ ಸದಸ್ಯರ ಪರಸ್ಪರ ಪರಿಚಯ ಮಾಡಿಕೊಂಡು, ವಾರ್ಡ್ ವ್ಯಾಪ್ತಿಯಲ್ಲಿ ಕೋವಿಡ್–19 ಸಾಂಕ್ರಾಮಿಕ ರೋಗದ ನಿಯಂತ್ರಣದ ಬಗ್ಗೆ ಸವಿವರವಾಗಿ ಚರ್ಚಿಸಲು ಸಾರ್ವಜನಿಕರಿಗೆ ತಿಳಿಸಲಾಯಿತು.

- ಮಾನ್ಯ ನೋಡಲ್ ಅಧಿಕಾರಿಯವರು ಕೋವಿಡ್–19 ಸಾಂಕ್ರಾಮಿಕ ರೋಗವನ್ನು ತಡೆಗಟ್ಟಲು ಮಾನ್ಯ ಮುಖ್ಯ ಆಯುಕ್ತರ ಕಛೇರಿ ಆದೇಶ ಸಂಖ್ಯೆ: ಬಿ12(ಕೋ–19)/04/2021–22 ರಂತೆ ವಾರ್ಡ್–53 ಬಸವನಪುರದ ವಾರ್ಡ್ ಮಟ್ಟದ ವಿಕೇಂದ್ರೀಕೃತ ಚಿಕಿತ್ಸೆಯ ಸರದಿ ನಿರ್ಧಾರ ಮತ್ತು ತುರ್ತು ಪ್ರತಿಕ್ರಿಯೆ ಸಮಿತಿ (W.D.C) ಯನ್ನು ರಚಿಸುವ ಕುರಿತು ಮಾತನಾಡುತ್ತಾ, ಮಾನ್ಯ ಮುಖ್ಯ ಆಯುಕ್ತರ ಆದೇಶದಂತೆ ಸದರಿ ವಾರ್ಡ್‌ನಲ್ಲಿನ,
  ನೋಡಲ್ ಅಧಿಕಾರಿ– ಅಧ್ಯಕ್ಷರು
  ವಾರ್ಡ್‌ನ ಸಹಾಯಕ ಅಭಿಯಂತರರು– ಸದಸ್ಯ ಕಾರ್ಯದರ್ಶಿ
  ವಾರ್ಡ್‌ಗೆ ಸಂಬಂಧಿಸಿದ ಪಾಲಿಕೆಯ ಎಲ್ಲಾ ಅಧಿಕಾರಿಗಳು– ಸದಸ್ಯರು
  ವಾರ್ಡ್‌ಗೆ ಸಂಬಂಧಿಸಿದ ಇತರೆ ಎಲ್ಲಾ ಅಧಿಕಾರಿಗಳು– ಸದಸ್ಯರು
  ವಾರ್ಡ್‌ನಲ್ಲಿನ ಸಾಮಾಜಿಕ ಕಲ್ಯಾಣ ಅಸೋಸಿಯೇಷನ್‌ಗಳು– ಸದಸ್ಯರು
  ಸ್ವಯಂ ಸೇವಕರು– ಸದಸ್ಯರು
  ಆಗಿದ್ದು, ಅದರಂತೆ ಸಮಿತಿಯನ್ನು ರಚಿಸಲು ಸೂಚಿಸಲಾಗಿರುತ್ತದೆ ಎಂದು ಸಭೆಯಲ್ಲಿ ತಿಳಿಸಿದರು.

Scanned with CamScanner

- ಮುಂದುವರೆದು, ಮಾನ್ಯ ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: RD.158 TNR2020(1),dated: 07/05/2021 ರಂತೆ, ವಾರ್ಡ್ ವ್ಯಾಪ್ತಿಯಲ್ಲಿ ಕೋವಿಡ್ ಸೋಂಕಿತ ರೋಗಿಗಳಿಗೆ ಅಗತ್ಯ ಚಿಕಿತ್ಸೆ ದೊರಕಿಸಿಕೊಡುವ ನಿಟ್ಟಿನಲ್ಲಿ ಟ್ರಾಯೆಜ್ ರೂಂ ಅನ್ನು ರಚಿಸಬೇಕಾಗಿರುತ್ತದೆ. ಆದುದರಿಂದ ನಮ್ಮ ವಾರ್ಡ್‌ನಲ್ಲಿ ಸೂಕ್ತವಾದ ಸ್ಥಳವನ್ನು ಗುರುತಿಸುವುದು ಅಗತ್ಯವಾಗಿರುತ್ತದೆ ಎಂದು ಸಭೆಯಲ್ಲಿ ತಿಳಿಸಿದರು.
- ನಂತರ ಕಾರ್ಯದರ್ಶಿರವರು ಹಾಗೂ ಆರೋಗ್ಯ ಪರಿವೀಕ್ಷಕರು ಮಾತನಾಡುತ್ತಾ, ಸೀಗೆಹಳ್ಳಿಯಲ್ಲಿರುವ ಸರ್ಕಾರಿ ಹೆರಿಗೆ ಆಸ್ಪತ್ರೆಯಲ್ಲಿ ಟ್ರಾಯೆಜ್ ರೂಂ ಅನ್ನು ರಚಿಸಲು ಸೂಕ್ತವಾಗಿರುವುದಾಗಿ ತಿಳಿಸಿದರು.
- ಮಾನ್ಯ ನೋಡಲ್ ಅಧಿಕಾರಿಯವರು ಮಾತನಾಡುತ್ತಾ, ಸದರಿ ಸ್ಥಳವನ್ನು ಭೇಟಿ ನೀಡಿ ಪರಿಶೀಲಿಸುವುದು ಅಗತ್ಯವಾಗಿರುವುದಾಗಿ ಸಭೆಯಲ್ಲಿ ತಳಿಸಿದರು.
- ನಂತರ, ಸಭೆಯಲ್ಲಿ ಉಪಸ್ಥಿತರಿರುವ ಎಲ್ಲಾ ಅಧಿಕಾರಿಗಳು ಪರೀವಿಕ್ಷಣೆಗಾಗಿ ತೆರಳಿದರು.
- ಟ್ರಾಯೆಜ್ ರೂಂ ಸಂಬಂಧಿತ ನಿರ್ವಹಣಾ ಸಮಾಲೋಚಕರನ್ನು ನಿಯೋಜಿಸುವ ಬಗ್ಗೆ ಚರ್ಚಿಸಲಾಯಿತು.

ಮುಂದುವರೆದು, ಪ್ರತೀ ಸಭಾ ನಡವಳಿಗಳನ್ನು ಸಮಿತಿಯ ಎಲ್ಲಾ ಸದಸ್ಯರುಗಳಿಗೆ ತಲುಪುವಂತೆ ಮಾಡಲು ಕಾರ್ಯದರ್ಶಿ ರವರಿಗೆ ತಿಳಿಸಲಾಯಿತು, ಎಲ್ಲಾ ಸದಸ್ಯರುಗಳು ತಮಗೆ ವಹಿಸಿದ ಕಾರ್ಯಗಳನ್ನು ಸೂಕ್ತವಾಗಿ ನಿರ್ವಹಿಸುವಂತೆ ಸೂಚಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಮಾನ್ಯ ಅಧ್ಯಕ್ಷರು ವಾರ್ಡ್ ಸಮಿತಿ
ಮತ್ತು ನೋಡಲ್ ಅಧಿಕಾರಿ

ವಾರ್ಡ್ ಸಮಿತಿ ಕಾರ್ಯದರ್ಶಿಗಳು
ಹಾಗೂ ಸಹಾಯಕ ಅಭಿಯಂತರರು

Scanned with CamScanner